ಹೃದಯರ ಮನೋವಾಸ **ವಿಜಯವಿಠಲ**ಪಡುವಲ ।

ಉದಧಿ ತೀರದಲಿಪ್ಪ। ಇದೆದ್ವಾರಕಿ ಎಂದು ॥ 5 ॥

ಜತೆ

ಮಧ್ವಸರೋವರಸ್ನಾನ । ಮುದ್ದು ಕೃಷ್ಣನ ಧ್ಯಾನ ।

ಶುದ್ಧವಾಗಿ ಮಾಡೆ **ವಿಜಯವಿಠಲ**ಕಾವಾ ॥ 6 ॥

## ಉಡುಪಿ ಕೃಷ್ಣ

ರಾಗ ಭೈರವಿ ಧ್ರುವತಾಳ

ಸುಳಿನಾಭಿ ಸುಮನೋಹರವಾದ ಉದರ ತ್ರಿ - ।

ವಳಿಯಲ್ಲಿ ತ್ರಿಲೋಕಾಶ್ರಯ ಮಾಡಿಕೊಂಡಿರೆ ।

ಎಳೆತುಳಸಿ ಕೌಸ್ತುಭಮಣಿ ಶಿರಿ ವತ್ಸ ಪರಿ ।

ಮಳ ದ್ರವ್ಯ ಸೂಸುತಿರೆ ಸರ್ವಾಂಗದಲ್ಲಿ ನಿತ್ಯ ।

ಬೆಳಗುವ ಎಳೆನಗೆ  ಕುಂದು ಕುಸುಮದಂತೆ ।

ನಳನಳಿಸುವ  ನಳಿತೋಳು ಉನ್ನತ ಬಾಹು ।

ಗಳ ಕರ್ಪೂರಾದ ಕರಡಿಗೆ ಯಂದಾದಿ ವನಾ ।

ಗಿಳೀ ವಿಂಡು ಸೋಲುವ ಧರ ಕಪೋಲ ಕರ್ತ ।

ವೊಲಿಪಾ ಕುಂಡಲ ಮುಂಬಣೆಯಲ್ಲಿ ತೂಗುವ ।

ಅಳಿಯಗೂದಲು ವಿಸ್ತಾರ ನೊಸಲು ತಿಲಕ ।

ಚಲುವ ಕಂಕಣ ಕಡಗ ಬೆರಳನಾನಾ ಉಂಗರ ।

ಮಂದಹಾಸವದನ **ವಿಜಯವಿಠಲ**ನಿಪ್ಪ

ಇಂದುಕ್ಷೇತ್ರವಿದು ವಿವರಿಸಿ ತಿಳಿವದೂ ॥ 3 ॥

ಜಲಜ ಸಂಭವನ ಪುತ್ರ ದಕ್ಷನು ಶಪಿಸಲು ।

ಕಳೇಗುಂದಿ ಚಂದ್ರನು ತಿಳಿದು ಭಾರ್ಗವಕ್ಷೇತ್ರ

ದೊಳಗೆ ಇದೇವೆಗ್ಗಳಿಕೆಯಾಸ್ಥಳವೆಂದೂ ।

ಕುಳಿತಾಜಾರಣ್ಯ ಮಧ್ಯದಲ್ಲಿ ತಪಮಾಡಿ ।

ಒಲಿಸಿ ತನ್ನನು ಧರಿಸಿದ ದೇವನ ಪಾದ ।

ಜಲಜಾವ ಕಂಡು ಶಾಪವನ್ನು ಪೋಗಾಡಿ ।

ಕಳೆವೇರಿದನು ದಿನಪ್ರತಿಯಲ್ಲಿ ಪೊಳವುತ್ತ ।

ಪುಲಿದೊಗಲಾಂಬರನು ಅನಂತಾಸನ್ನ ।

ಬಳಿಯಲ್ಲಿ ನಿಂದನು ಸಮುಗವಾಗಿ ನಿ ।

ಶ್ಚಲ ವರನೀವುತ ಬಂದ ಭಕುತರನ್ನ ।

ಸಲಹುತ್ತ ಚಂದ್ರಮೌಳೇಶ್ವರನೆಂದೆಂಬಾ ।

ಪತಿ ಪೆಸರಿನಲ್ಲಿ ಮೆರೆವುತಲಿಪ್ಪದು ।

ಕಲಿಯುಗದಲಿ ಬಂದಾ ಕೃಷ್ಣ **ವಿಜಯವಿ** -।

**ಠಲ** ನಾನಾ ಮಂಗಳಾ ನೆನೆಯುತ್ತ ನಲಿವುತ್ತ ॥ 4 ॥

ಪರುಶರಾಮನು ತನ್ನ ಸಿರಿಯಕೂಡ ವಿಮಾನ ॥

ಗಿರಿಯಲ್ಲಿ ನಿಂದಾನು ಸುರರಿಂದರ್ಚನೆಕೊಳ್ಳುತ್ತ ।

ಅರಸು ತಾನಾಗಿ ನಿರಂತರದಲ್ಲಿ ವೊಪ್ಪುತಿಪ್ಪ ।

